ಕಾಳಸಂತೆಯಲ್ಲಿ ಮಾರುತ್ತಿದ್ದಾರೆ. ಬ್ಯಾಂಕಿನ ಪಸ್ಟ್ರಾದ ಮಳಿಗೆಯಲ್ಲಿ ನಷ್ಟ ನಡೆದಿದೆ, ಈ ಬ್ಯಾಂಕ್ ವರ್ಷವೂ ನಷ್ಟದಿಂದ ನಡೆಯುತ್ತಿದೆ. ಕೃಷಿ ವ್ಯವಹಾರದ ಬಗ್ಗೆ ಕೊಟ್ಟ ಸಬ್ಸಿಡಿ ಸಾಲ ನಿಜವಾಗಿಯೂ ಸಾಲಗಾರರಿಗೆ ತಲುಪಿಲ್ಲ. ಅಲ್ಲಿ ಸಾಕಷ್ಟು ಅವ್ಯವಹಾರ ನಡೆದಿದ್ದು ಆದನ್ನು ಆಡಿಟ್ ರಿಪೋರ್ಟಿನಲ್ಲಿ ಅನೇಕ ಸಾರಿ ಆವ್ಯವಹಾರ ಗುರುತಿಸಿದರೂ ಸರಕಾರ ಕ್ರಮ ಕೈಗೊಂಡಿಲ್ಲ. ಕಾಪು ಕ್ಷೇತ್ರದ ಮಲ್ಲಾರು ಗ್ರಾಮದ ಹರಿಜನರಿಗೆ ೮೪-೮೫ ನೇ ಸಾಲಿನಲ್ಲಿ ಈ ಸಹಕಾರಿ ಸಂಘದ ಮೂಲಕ ೫ ಲಕ್ಷ ರೂಪಾಯಿಗಳ ಸಾಲ ವನ್ನು ನೀಡಿದರೂ ಇದು ಸಮರ್ಪಕವಾಗಿ ವಿತರಣೆ ಯಾಗಿಲ್ಲ. ಈ ಬಗ್ಗೆ ಕೂಡಲೇ ಅಲ್ಲಿಗೆ ಒಬ್ಬ ಆಡಳಿತಾಧಿಕಾರಿಯನ್ನು ನೇಮಿಸಿ ಈ ರೀತಿಯ ಅವ್ಯವಹಾರ ನಡೆಯದಂತೆ ನೋಡಿಕೊಳ್ಳಬೇಕೆಂದು ನಾನು ಸರ್ಕಾರವನ್ನು ಒತ್ತಾಯಿಸುತ್ತಿದ್ದೇನೆ.''

ಶ್ರೀ ಆರ್. ಎಲ್. ಜಾಲಪ್ಪ — ಈಗ ತಾನೆ ನನಗೆ ಮಾನ್ಯ ಸದಸ್ಯರು ನಿಯಮ ೩೫೪ರ ಕೆಳಗೆ ಈ ವಿಷಯವನ್ನು ನನ್ನ ಗಮನಕ್ಕೆ ತಂದಿದ್ದಾರೆ. ಇನ್ನು ಎರಡು ದಿವಸಗಳಲ್ಲಿ ಆದಕ್ಕೆ ಉತ್ತರವನ್ನು ತರಿಸಿಕೊಡುತ್ತೇನೆ. ಜೊತೆಗೆ ಆಲ್ಲಿ ಯಾರಾದರೂ ಅವ್ಯವಹಾರ ನಡೆದಿದ್ದರೆ ತಕ್ಷಣ ಅವರ ಮೇಲೆ ಕ್ರಮ ಕೂಡ ಕೈಗೊಳ್ಳುತ್ತೇನೆ

ವೃಷಭಾವತಿ ಕಣಿವೆಯಲ್ಲಿ ಬೆಳೆದ ತರಕಾರಿಯ ಬಗ್ಗೆ

ಶ್ರೀ ಎಂ. ಎಸ್. ಕೃಷ್ಣನ್.— ಮಾನ್ಯ ಅಧ್ಯಕ್ಷರೇ,

''ಬೆಂಗಳೂರಿನ ಸುತ್ತ ಮುತ್ತಲೂ ತರಕಾರಿ ಮತ್ತು ಹಣ್ಣುಗಳನ್ನು ಅನೇಕರು ಬೆಳೆಯುತ್ತಿದ್ದಾರೆ. ಇದರಲ್ಲಿ ಬ್ಯಾಟರಾಯನಪುರ ಮಾತ್ರ ಕನಕಪುರದ ಮಾರ್ಗದಲ್ಲಿ ಬೆಂಗಳೂರಿನ ಹೊರವಲಯದಲ್ಲಿ ವೃಷಭಾವತಿ ಕಣಿವೆಯಲ್ಲಿ ಬೆಳೆಯುವ ತರಕಾರಿ ಮತ್ತು ಹಣ್ಣುಗಳನ್ನು ತಿಂದವರು ಅನೇಕರಿಗೆ ಡಿಸೆಂಟ್ರಿ ಕಾಯಿಲೆ ಬಂದಿದೆ ಎಂದು ವರದಿಯಾಗಿದೆ. ಇಷ್ಟು ಮಾತ್ರ ಅಲ್ಲ, ಆದರಿಂದ ಅನೇಕ ಜನಗಳಿಗೆ ಯಾರ್ಮಾರೂ ಕೆಲಸ ಮಾಡುತ್ತಿದ್ದಾರೆ, ಬಡವರು ಹೆಚ್ಚಾಗಿ ಇದ್ದಾರೆ ಅಂತಹವರಿಗೆ ಚರ್ಮದ ರೋಗ ಕೂಡ ಬಂದಿದೆ. ಇದೇ ರೀತಿಯ ಇನ್ನೂ ಅನೇಕ ರೋಗಗಳು ಬಂದಿವೆ ಎಂದು ಪತ್ರಿಕೆಯಲ್ಲಿ ಅತ್ಯಂತ ಕಳವಳಕಾರಿಯಾದ ವರದಿ ಒಂದು ಡೆಕ್ಕನ್ ಹೆರಾಲ್ಡ್ ದಿನಪತ್ರಿಕೆಯಲ್ಲಿ ೩೧ ನೇ ತಾರೀಖು ವರದಿಯಾಗಿದೆ.

ಸುಮಾರು ಎರಡು ಲಕ್ಷ ಜನ ಇದರಿಂದ ಭಾದಿಸಲ್ಪಟ್ಟಿದ್ದಾರೆ ಎಂದೂ ಕೂಡಾ ವರದಿಯಾಗಿದೆ. ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್‌ನವರು ಈ ಬಗ್ಗೆ ತನಿಖೆ ನಡೆಸಿ ಇದನ್ನು ಪಬ್ಲಿಷ್ ಮಾಡಿದ್ದಾರೆ. ಸುಮಾರು ೮೫ ಕೈಗಾರಿಕೆಗಳ ಮಲಿನ ಅಲ್ಲಿ ಹೋಗುತ್ತಿದೆ. ಅಲ್ಲಿ ಅನೇಕ ರೀತಿಯ ದ್ರಾವಕ ಮತ್ತು ಇತರೆ ಮಿಶ್ರಿತ ನೀರಿನಿಂದ ಈ ತೊಂದರೆಗಳು ಆಗುತ್ತಿವೆ ಎಂದು ತಜ್ಞರು ಹೇಳಿದ್ದಾರೆ. ಆದ್ದರಿಂದ ಇದರ ಬಗ್ಗೆ ಸರ್ಕಾರ ತಕ್ಷಣ ಗಮನ ಹರಿಸಬೇಕಾಗಿದೆ. ಮತ್ತೆ ಪಲ್ಯೂಷನ್ ಕಂಟ್ರೋಲ್ ಬೋರ್ಡ್ ಕೂಡ ಒಂದು ಇದೆ. ಅವರಿಕ್ಕೆ ಬೋರ್ಡ್ ಕೂಡ ಒಂದು ಇದೆ, ಆದರೆ ಅದು ಏನು ಮಾಡುತ್ತಿದೆ ? ಇದರ ಬಗ್ಗೆ ಸ್ಪಷ್ಟವಾದ ಉತ್ತರವನ್ನು ಸರ್ಕಾರ ಕೊಡಬೇಕು.

ಶ್ರೀ ಎ. ಲಕ್ಷ್ಮಿಸಾಗರ್.— ಸಾಧ್ಯವಿದ್ದು ಇದರ ಬಗ್ಗೆ ಉತ್ತರವನ್ನು ಕೊಡಲಾಗುವುದು.

ಮಾಲೂರಿನ ಪ್ರಭಾವಿ ವ್ಯಕ್ತಿಯಿಂದ ಸಿಮೆಂಟ್ ಕಾರ್ಖಾನೆಯ ಸ್ಥಾಪನೆ

ಶ್ರೀ ಎಚ್. ಬಿ. ದ್ಯಾವರಪ್ಪ.— ಮಾನ್ಯ ಅಧ್ಯಕ್ಷರೇ, ಮಾಲೂರು ನಗರದಲ್ಲಿ ಒಬ್ಬ ಪ್ರಭಾವಿ ವ್ಯಕ್ತಿ ಸಿಮೆಂಟ್ ಕಾರ್ಖಾನೆ ಪ್ರಾರಂಭಿಸುವ ತರದಲ್ಲಿನಲ್ಲಿ ಕಟ್ಟಡ ಕಟ್ಟಲು ಪ್ರಾರಂಭಿಸಿದ್ದಾನೆ ಇದರಿಂದ ಸುತ್ತಮುತ್ತ ತರಕಾರಿ ಬೆಳೆಯುವ ಬೆಲೆ ಜಾಳುವ ಜಮೀನುಗಳಿದ್ದು ಪರಿಸರ ಮಾಲಿನ್ಯವಾಗುವುದಲ್ಲದೆ ಬೆಳೆಗಳಿಗೆ ಅತಿ ಹೆಚ್ಚಿನ ನಷ್ಟವಾಗಲಿದ್ದು ಈ ಬಗ್ಗೆ ಸಾವಿರಾರು ರೈತರು ವಿರೋಧ ವ್ಯಕ್ತಪಡಿಸಿ ಬಂದ್ ಆಚರಿಸಿದರೂ, ಇದುವರೆವಿಗೂ ಸರ್ಕಾರ ಯಾವ ಕ್ರಮವನ್ನು ತೆಗೆದುಕೊಂಡಿಲ್ಲ. ಕಟ್ಟಡದ ಕೆಲಸ ಮುಂದುವರೆದಿದೆ. ಕಾರ್ಖಾನೆ ಕಟ್ಟುವ ಬಗ್ಗೆ ಯಾವ ಪರವಾನಗಿಯನ್ನು ಪಡೆದಿರುವುದಿಲ್ಲ. ಈಗ ಅಲ್ಲಿ ಕಟ್ಟಡದ ಕೆಲಸವನ್ನು ಕೂಡಲೇ ನಿಲ್ಲಿಸಬೇಕು. ಈ ಕಾರ್ಖಾನೆ ಅಲ್ಲಿ ಆಗಬಾರದು. ಇದರ ಬಗ್ಗೆ ಸರ್ಕಾರದ ಗಮನವನ್ನು ಸೆಳೆಯುತ್ತೇನೆ.

ಶ್ರೀ ಜೆ ಎಚ್. ಪಟೇಲ್.—ಸರ್ಕಾರ ಕಾರ್ಖಾನೆಗೆ ಅನುಮತಿಯನ್ನು ಕೊಡುವುದಕ್ಕಿಂತ ಮುಂಚೆ ಪರಿಸರ ಮಾಲಿನ್ಯವನ್ನು ನಿಯಂತ್ರಣ ಮಾಡತಕ್ಕಂತಹ ಸಮಿತಿಯ ಅಭಿಪ್ರಾಯವನ್ನು ಪಡದೇ ನಂತರ ಅವುಗಳಿಗೆ ಅನುಮತಿಯನ್ನು ಕೊಡತಕ್ಕಂತಹದ್ದು. ಆದರೆ ಈಗ ಮಾನ್ಯ ಸದಸ್ಯರು ಹೇಳತಕ್ಕಂತಹ ವಿಚಾರದಲ್ಲಿ ಮತ್ತೊಮ್ಮೆ ಪರಿಸರ ಮಾಲಿನ್ಯದ ಸಮಿತಿಯವರ ಅಭಿಪ್ರಾಯವನ್ನು ಪಡೆದು ಆ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇನೆ.

ಘಟಪ್ರಭಾ ಪುನರ್ ನಿವೇಶನ ಕೇಂದ್ರದಲ್ಲಿ ಕುಡಿಯುವ ನೀರಿನ ತೊಂದರೆ

ಶ್ರೀ ಎಂ. ಎಸ್. ಪಾಟೀಲ್.— ಹುಕ್ಕೇರಿ ತಾಲ್ಲೂಕಿನ ಘಟಪ್ರಭಾ ಪುನರ್ ನಿವೇಶನ ಕೇಂದ್ರದಲ್ಲಿ ಕುಡಿಯುವ ನೀರಿನ ತೊಂದರೆ, ಒಕ್ಕಲುತನದ ಪ್ಲಾಟುಗಳಿಗೆ ಹೋಗುವ ದಾರಿಯ ನಿರ್ಮಾಣ, ಸ್ಮಶಾನ ಕ್ಕಾಗಿ ನಿಗದಿ ಮಾಡಿದ ಸ್ಥಳ ತೋರಿಸುವುದು, ಹಾಗೂ ದಡ್ಡಿ–ನಾಗನೂರ್ ಪುನರ್ನಿವೇಶನ ಕೇಂದ್ರದ ಯಾತ ನೀರಾವರಿ ಕಾಮಗಾರಿಯನ್ನು ತ್ವರಿತವಾಗಿ ಪ್ರಾರಂಭಿಸುವುದು. ಈ ವಿಷಯಗಳನ್ನು ಸರ್ಕಾರದ ಇಲಾಖೆಯಿಂದ ಗಣನೆಗೆ ತೆಗೆದುಕೊಳ್ಳದೆ ಇರುವುದರಿಂದ, ಆದಷ್ಟು ಶೀಘ್ರವಾಗಿ ಇವುಗಳನ್ನು ಗಣನೆಗೆ ತೆಗೆದುಕೊಳ್ಳುವಂತೆ ಮಾಡಬೇಕೆಂದು ಸರ್ಕಾರವನ್ನು ಈ ಮೂಲಕ ಒತ್ತಾಯಿಸುತ್ತಿದ್ದೇನೆ.

ಶ್ರೀ ಎಚ್. ಡಿ. ದೇವೇಗೌಡ.— ಈ ಸಮಸ್ಯೆಯನ್ನು ಬಗೆಹರಿಸುತ್ತೇನೆ

ಚಿತಾಪುರದಲ್ಲಿ ತರಕಾರಿ ಮಾರ್ಕೆಟ್‌ಗೆ ನಿವೇಶನವನ್ನು ಕಾಮಗಾರಿ ಇಲಾಖೆಯಿಂದ ಟೌನ್ ಮುನಿಸಿಪಲ್ ಕೌನ್ಸಿಲ್‌ಗೆ ವರ್ಗಾಯಿಸುವುದು.

ಶ್ರೀ ಕೆ. ಬಿ. ಶಾನಪ್ಪ.— ಇದು ಮಾನ್ಯ ಲೋಕೋಪಯೋಗಿ ಇಲಾಖೆಯ ಸಚಿವರಿಗೆ ಸಂಬಂಧ ಪಟ್ಟದ್ದು. ಗುಲ್ಬರ್ಗ ಜಿಲ್ಲೆಯಲ್ಲಿ ಚಿತಾಪುರ ತಾಲ್ಲೂಕು ಒಂದು ತಾಲ್ಲೂಕು. ಅಲ್ಲಿ ೨–೩ ವರ್ಷಗಳಿಂದ ತರಕಾರಿ ಮಾರತಕ್ಕಂತಹ ಜನ ಅವರಿಗೆ ಮಾರ್ಕೆಟಿಂಗ್ ಸೌಲಭ್ಯ ಬೇಕಾಗಿದೆ. ಅಲ್ಲಿದ್ದ ಲೋಕೋಪಯೋಗಿ ಇಲಾಖೆಗೆ ಸೇರಿದ ಒಂದು ಸಣ್ಣ ನಿವೇಶನವನ್ನು ಪುರಸಭೆಯವರ ವಶಕ್ಕೆ ಕೊಡಲು ಬೇಡಿಕೊಂಡಿದ್ದರೂ ಅದು ಇದುವರೆವಿಗೂ ಅವರ ವಶಕ್ಕೆ ಬಂದಿಲ್ಲ. ಇದಕ್ಕಾಗಿ ಲೋಕೋಪಯೋಗಿ ಇಲಾಖೆಯವರು ೪೦ ಸಾವಿರ ರೂಪಾಯಿಗಳನ್ನು ಪುರಸಭೆಯವರು ತುಂಬ ಬೇಕೆಂಬ ಒಂದು ಪರತ್ತನ್ನು ಹಾಕಿದ್ದಾರೆ. ಇದರ ಬಗ್ಗೆ ಮಂತ್ರಿಗಳಿಗೂ ಕೂಡ ಬರೆದದ್ದಾಯಿತು. ವಿಶ್ವನಾಥ ಪಾಟೀಲ್‌ರವರೂ ಕೂಡ ಇದರ ಬಗ್ಗೆ ಆಸಕ್ತಿವಹಿಸಿ ಕಳೆದ ೨–೩ ವರ್ಷಗಳಿಂದಲೂ ಪ್ರಯತ್ನ ಮಾಡುತ್ತಿದ್ದಾರೆ. ಪುರಸಭೆಯವರು ಲೋಕೋಪಯೋಗಿ ಇಲಾಖೆಯವರು ಕೇಳಿದ ೪೦ ಸಾವಿರ ರೂಪಾಯಿಗಳನ್ನು ಪ್ರತಿ ವರ್ಷ ೧೦ ಸಾವಿರ ರೂಪಾಯಿಗಳಂತೆ ೪ ವರ್ಷದಲ್ಲಿ ತುಂಬಿ ಕೊಡುತ್ತೇವೆಂದೂ ಕೂಡ ಒಪ್ಪಿದ್ದಾರೆ. ಇದರ ಬಗ್ಗೆ ಸರ್ಕಾರದ ಗಮನ ಸೆಳೆಯಬಯಸುತ್ತೇನೆ.

ಶ್ರೀ ಎಚ್. ಡಿ. ದೇವೇಗೌಡ.— ಈ ನಿವೇಶನ ನಾನು ಇದುವರೆವಿಗೂ ನಗರಾಡಳಿತ ಸಚಿವರಿಗೆ ಸಂಬಂಧಪಟ್ಟದ್ದು ಎಂಬುದಾಗಿ ತಿಳಿದುಕೊಂಡಿದ್ದೆ. ಆದರೆ ಮಾನ್ಯ ಸದಸ್ಯರು ಹೇಳಿದ್ದರಿಂದ ಈಗ ಅರ್ಥವಾಗಿದೆ. ಲೋಕೋಪಯೋಗಿ ಇಲಾಖೆಯಿಂದ ಪುರಸಭೆಗೆ ಆ ನಿವೇಶನ ವರ್ಗಾವಣೆಯಾಗಬೇಕು, ಇದರ ಬಗ್ಗೆ ನಾನೂ ಮಾನ್ಯ ನಗರಾಡಳಿತ ಸಚಿವರು ಹಾಗೂ ಸನ್ಮಾನ್ಯ ಸದಸ್ಯರು ಕಳಿತುಕೊಂಡು ಅಧಿಕಾರಿಗಳನ್ನು ಕರೆಯಿಸಿ ಅದರ ಬಗ್ಗೆ ಪರಿಶೀಲನೆ ಮಾಡುತ್ತೇನೆ.

ಸೋಮವಾರ ಪೇಟೆ ತಾಲ್ಲೂಕಿನಲ್ಲಿ ಕಾಡಾನೆಗಳ ಹಾವಳಿ

ಶ್ರೀ ಡಿ. ಎ. ಜಿನ್ನಪ್ಪ.— ಮಾನ್ಯ ಅಧ್ಯಕ್ಷರೇ, ಸೋಮವಾರಪೇಟೆ ತಾಲ್ಲೂಕು ಬಿಟ್ಟಿಪುರ, ಅಗಳಿ ಕೋಟಿಗನಹಳ್ಳಿ, ಇಷ್ಟುಎಳಲೆ, ಬಾಜಾಪುರ ಹಾಗೂ ಬೇಸೂರು ಪಂಚಾಯ್ತಿಗೆ ಸೇರಿದ ಗ್ರಾಮಗಳಲ್ಲಿ ಕಾಡಾನೆಗಳ ಹಾವಳಿ ತೀವ್ರವಾಗಿದ್ದು ನಾಗರೀಕರ ಆಸ್ತಿ ಪಾಸ್ತಿಗಳಿಗೆ ತುಂಬಾ ಹಾನಿಯಾಗಿದ್ದು ಈ ರೀತಿಯ ಹಾವಳಿ ಸುಮಾರು ೪ ತಿಂಗಳಿಂದ ನಡೆಯುತ್ತಿದೆ. ಇದರಿಂದ ಲಕ್ಷಗಟ್ಟಲೆ ಆಸ್ತಿ ಪಾಸ್ತಿ ನಷ್ಟವಾಗಿದೆ. ಇದರ ಸರ್ವೆ ನಂಬರ್ ೧೨೫ : ೯೧, ೧೨೨, ೧೨೩ : ೧, ೧೨೫ : ೧೪೯, ೧೨೫ : ೧೫೦ : ೪